

# ಶ್ರಮದ ದುಡ್ಡು

ಒಂದು ಊರಿನಲ್ಲಿ ಒಬ್ಬ ವ್ಯಾಪಾರಸ್ಥನಿದ್ದನು. ಅವನ ಹೆಸರು ಪರಮಶೆಟ್ಟಿ. ಅವನು ನ್ಯಾಯ ಪರನು ಸತ್ಯ ಸಂದನು ಆಗಿದ್ದನು. ತನ್ನ ವ್ಯಾಪಾರದಲ್ಲಿ ಯಾರಿಗೂ ನಷ್ಟವಾಗದಂತೆ ನೋಡಿಕೊಂಡು ತಾನೂ ಬಾಳಿ ಇತರರಿಗೂ ಬಾಳಲು ಅನುವು ಮಾಡಿಕೊಡುತ್ತಿದ್ದ. ಜನರಿಗೆ ಅವನ ಮೇಲೆ ತುಂಬಾ ಗೌರವ. ಪರಮಶೆಟ್ಟಿಗೆ ಒಬ್ಬ ಮಗನಿದ್ದನು. ಅವನೇ ಆನಂದಶೆಟ್ಟಿ. ಹೆಸರಿಗೆ ತಕ್ಕ ಹಾಗೆ ಸದಾ ಆನಂದದಿರಲು ಬಹಳಷ್ಟು ಹಣವನ್ನು ಖರ್ಚು ಮಾಡುತ್ತಿದ್ದ. ಹಣದ ಮಹತ್ವ ಅರಿಯದೇ ಉಂಡಾಡಿ ಗುಂಡನಾಗಿದ್ದ.

ಪರಮಶೆಟ್ಟಿಯ ಹೆಂಡತಿ ಶಾಂತಾ ಬಾಯಿಗೆ ತನ್ನ ಮಗನ ದುಂದುಗಾರಿಕೆ ಸ್ವಲ್ಪವೂ ಇಷ್ಟವಾಗಿರಲಿಲ್ಲ. ಅವಳು ಒಮ್ಮೆ ಪರಮಶೆಟ್ಟಿಯನ್ನು ಕುರಿತು 'ನೋಡಿ ನಮ್ಮ ಮಗನು ದುಂದು ವೆಚ್ಚಗಾರನಾಗಿದ್ದಾನೆ. ಅವನ ದುಂದುಗಾರಿಕೆ ಅತೀಯಾಗಿದೆ. ಅವನಿಗೆ ಹಣದ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲ. ಹೀಗೆ ಆದರೆ ಅವನ ಮುಂದಿನ ಜೀವನದ ಬಗ್ಗೆ ನನಗೆ ಚಿಂತೆಯಾಗಿದೆ ದಯವಿಟ್ಟು ಅವನಿಗೆ ಕರೆದು ಸ್ವಲ್ಪ ಬುದ್ಧಿ ಹೇಳಿ ಯಾವುದಾದರೂ ಕೆಲಸಕ್ಕೆ ಹೋಗುವಂತೆ ಮಾಡಿ' ಎಂದು ಬೇಡಿಕೊಂಡಳು. ಪರಮಶೆಟ್ಟಿಗೂ ಅವನ ದುಂದುಗಾರಿಕೆಯ ಬಗ್ಗೆ ತಿಳಿದಿತ್ತು. ಹಲವು ಸಲ ತಿಳಿ ಹೇಳಿದರೂ ಆನಂದ ಅದಕ್ಕೆ ಸ್ವಲ್ಪವೂ ಸ್ಪಂದಿಸಿರಲಿಲ್ಲ.

ಒಂದು ದಿನ ಬೇಗನೆ ಅಂಗಡಿ ವ್ಯವಹಾರವನ್ನು ಮುಗಿಸಿ ಮನೆಗೆ ಬಂದು ಮಗನನ್ನು ಕರೆದು 'ಆನಂದ ದಿನಾಲೂ ಹಣವನ್ನು ನೀರಿನಂತೆ ಪೋಲು ಮಾಡುತ್ತಿರುವೆ. ನಿನಗೆ ಹಣದ ಮಹತ್ವ ತಿಳಿದಿಲ್ಲ. ಇಂದಿನಿಂದ ನೀನೂ ದಿನಾಲೂ ರೂ. 10 ಗಳಿಸಿಕೊಂಡು ಬಂದ ಮೇಲೆಯೇ ಊಟ ವಸತಿ. ಇದಕ್ಕೆ ತಪ್ಪಿದರೆ ನಿನ್ನನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ ತಿಳಿಯಿತೇ?' ಎಂದು ಎಚ್ಚರಿಕೆಯ ಜೊತೆ ಆದೇಶವನ್ನು ನೀಡಿದರು. ಈಗ ಆನಂದನಿಗೆ ಪೀಕಲಾಟ ಶುರುವಾಯಿತು. ಎಲ್ಲಿಂದ ಹತ್ತು ರೂಪಾಯಿ ತರುವುದು ಎಂದು ಚಿಂತಿಸತೊಡಗಿದ. ತನ್ನ ತಾಯಿ ಬಳಿ ಹೋಗಿ 'ಅಮ್ಮ ಇವತ್ತು ಹತ್ತು ರೂಪಾಯಿ ಕೊಡು. ನಾಳೆಯಿಂದ ನಾನು ದುಡಿದು ತರುತ್ತೇನೆ. ನನಗೆ ಹಸಿವು ತಡೆಯಲು ಆಗುವುದಿಲ್ಲ' ಎಂದು ಅಂಗಲಾಚಿದನು. ಹೆತ್ತ ಕರುಳು ಕರಗಿತು. ತಾಯಿ ಹತ್ತು ರೂಪಾಯಿ ನೀಡಿದಳು. ಸಂಜೆ ತಂದೆಯವರು ಬಂದರು.

ಆನಂದನನ್ನು ಕರೆದರು ಹಣವೆಲ್ಲಿ ಎಂದು ಕೇಳಿದರು. ತಡಮಾಡದೇ ತಾಯಿ ಕೊಟ್ಟ ಹತ್ತು ರೂಪಾಯಿಯನ್ನು ನೀಡಿದನು. 'ಇದನ್ನು ಒಯ್ದು